

ವಿಷಯ, ಟ್ರಾಫಿಕ್‌ನ ಹೈರಾಣ ಸ್ಥಿತಿ, ಒಂದೇ ಸಮನೆ ಏರುತ್ತಿರುವ ಬೆಲೆಗಳ ಕಾರುಬಾರು, ಹಳ್ಳಿತೋಟ ಪಾಳು ಬಿದ್ದ ಹಲವು ನಷ್ಟ- ನರಳಾಟಗಳು, ತಮ್ಮ ವೃತ್ತಿಜೀವನದ ದುಡಿಮೆಯ ಮಧುರ ನೆನಪುಗಳು, ಕಾಫಿ-–ತಿಂಡಿ–ಊಟ, ಕುಟುಂಬದ ಸುಖ-ಸಂಕಟಗಳು, ಮಕ್ಕಳು- ಮಗಳು ಎನ್ನದೆ ನಡೆಯುವ ಅತ್ಯಾಚಾರದ ಆರ್ಭಟ, ಎಲ್ಲೆಗಳೇ ಇಲ್ಲದ ಮಾತುಕತೆಗೆ ಸಹಚರಿಯಾಗಿದ್ದ ವಾಸುದೇವಯ್ಯ ಇವತ್ತು ಜೊತೆಗಿರಲಿಲ್ಲ.

ವಾಸುದೇವಯ್ಯ ತಮಗಿಂತ ಮೂರು ವರ್ಷ ಚಿಕ್ಕವರಿದ್ದರು. ತಮಗಿಂತ ಗಟ್ಟಿಮುಟ್ಟಾಗಿದ್ದರು. ತಮಗಿಂತ ಬಿ.ಪಿ, ಶುಗರ್ ಮುಕ್ತರಾಗಿದ್ದರು. ವಾಕಿಂಗ್‌ನಲ್ಲಿ ತಮಗಿಂತ ಎರಡೆಜ್ಜೆ ಮುಂದಿರುತ್ತಿದ್ದರು. ‘ಭಾನುವಾರ ಕಾರಿನಲ್ಲಿ ಹಳ್ಳಿಗೆ ಹೋಗುತ್ತಿದ್ದೇನೆ. ಫ್ರೀ ಇದ್ದರೆ ಬನ್ನಿ’ ಅಂತ ಕರೆದಿದ್ದಕ್ಕೆ ‘ಮಗ ಸೊಸೆ ಬರುತ್ತಿದ್ದಾರೆ. ನೀವು ಹೋಗಿದ್ದು ಬನ್ನಿ’ ಅಂದಿದ್ದರು. ಬೆಳಗ್ಗೆ ಎದ್ದು ಹಲ್ಲು ಬ್ರಷ್ ಮಾಡುವಾಗ ಸುಸ್ತು ಅಂದರಂತೆ. ಸನಿಹದಲ್ಲೇ